## ಖುಷಿಗೆ ಕಾರಣ

ಒಂದು ವಾರದಿಂದ ತುಂಬಾ ಬೇಸರದಲ್ಲಿದ್ದ ಮನೆ ಕೆಲಸದ ಗೌರಮ್ಮ ಇಂದು ಉತ್ಸಾಹದಿಂದ ಓಡಾಡುವುದನ್ನು ನೋಡಿದ ಗುಂಡನ ಹೆಂಡತಿ ಅವಳನ್ನು ಕೇಳಿದಳು: 'ಏನಮ್ಮಾ, ಒಂದು ವಾರದಿಂದ ಸಪ್ಪೆ ಮೋರೆ ಇತ್ತು. ಇವತ್ತೇನು ವಿಶೇಷ, ಇಷ್ಟು ಖುಷಿಯಾಗಿ ಓಡಾಡಿಕೊಂಡು ಕೆಲಸ ಮಾಡ್ತಾ ಇದ್ದೀಯ?' ಗೌರಮ್ಮ, 'ಏನಿಲ್ಲ ಬುಡಿ ಅಮ್ಮಾವ್ರೆ, ಇವತ್ತೆ ತಾನೆ ಯಜಮಾನ್ರು ಬಾಂಬೆಯಿಂದ ಬರ್ತಾ ಇರೋದು!' ಎಂದಳು ನಾಚಿಕೊಳ್ಳುತ್ತ.

**ಶಂಕರೇಗೌಡ ತುಂಬಕೆರೆ**





## ಹೊಟ್ಟೆ ಖಾಲಿ

ಮಧ್ಯಾಹ್ನ ಶಾಲೆಯಿಂದ ಬಂದು, ಊಟ ಮಾಡಿದ ಮೇಲಿಂದ ಪದೇ ಪದೇ ಟಾಯ್ಲೆಟ್‌ಗೆ ಹೋಗಿ ಬರುತ್ತಿದ್ದ ಮೊಮ್ಮಗನನ್ನು ತಾತ ಕೇಳಿದರು, 'ಯಾಕೋ ಮರಿ, ಇಷ್ಟು ಸಲ ಟಾಯ್ಲೆಟ್‌ಗೆ ಹೋಗ್ತಾ ಇದ್ದೀಯ. ಹೊಟ್ಟೆ ಸರಿ ಇಲ್ವಾ?' ಎಂದು. ಆತ ಹೇಳಿದ, 'ಹಾಗೇನಿಲ್ಲ ತಾತ, ಇವತ್ತು ಚಂದ್ರಗ್ರಹಣವಂತೆ, ಗ್ರಹಣ ಬಿಡುವವರೆಗೆ ಹೊಟ್ಟೆಯಲ್ಲಿ ಏನೂ ಇರಬಾರದಂತೆ, ಅದಕ್ಕೆ ಹೊಟ್ಟೆಯಲ್ಲಿರೋದನ್ನೆಲ್ಲ ಖಾಲಿ ಮಾಡಿ ಬರ್ತಾ ಇದ್ದೀನಿ' ಎನ್ನುತ್ತ ಮತ್ತೆ ಓಡಿದ.

**ಎಂ.ಆರ್. ರಘುನಾಥ್**